# ಹೊಸ ಒಕ್ಕಣಿಕೆಯ ಜರೂರು

ನಮ್ಮ ಒಳಗನ್ನು ಬೆಳಗುವ ಕೃತಿಗಳು ಯಾವತ್ತಿಗೂ ನಮ್ಮನ್ನು ಬೆಳೆಸುತ್ತಿರುತ್ತವೆ ಮತ್ತು ಪೊರೆಯುತ್ತಿರುತ್ತವೆ. ಆ ಬರಹಗಳ ಓದು ಕಡಲನ್ನು, ಆಕಾಶವನ್ನು ನೋಡಿದಂತೆ; ಪೂರ್ತಿಯಾಗಿ ತುಂಬಿಕೊಳ್ಳಲಾಗದ ಅವುಗಳ ಅಗಾಧತೆ ನಮ್ಮನ್ನು ಆವರಿಸುವುದಲ್ಲದೆ, ನಮ್ಮಲ್ಲಿ ದೊಡ್ಡ ಜಗತ್ತೊಂದನ್ನು ಸೃಷ್ಟಿಸುತ್ತದೆ. ಕಣ್ತುಂಬಿಕೊಂಡಾಗಲೆಲ್ಲ ಹೊಸ ಅರ್ಥಗಳನ್ನು ಧ್ವನಿಸುವ ಅವುಗಳ ಸೌಂದರ್ಯ, ನಿಗೂಢತೆ ನಮ್ಮನ್ನು ಆಗಾಗ ಕಾಡದೇ ಇರದು. ಅಂಥ ಕೃತಿಗಳನ್ನು ಸೃಷ್ಟಿಸಿದ ಲೇಖಕರಿಗೆ, ಅವರ ಕೃತಿಗಳಲ್ಲಿನ ಕಾಣ್ಕೆಗಳಿಗೆ ಓದುಗರು ಯಾವತ್ತಿಗೂ ಕೃತಜ್ಞರಾಗಿರುತ್ತಾರೆ.

ಈ ರೀತಿ ಓದುಗರಲ್ಲಿ ದೊಡ್ಡ ಜಗತ್ತನ್ನು ಸೃಷ್ಟಿಸುವ, ಬದುಕಿನ ಅಗಾಧತೆಯನ್ನು ಕಾಣಿಸುವ ಲೇಖಕರು ಕನ್ನಡದಲ್ಲಿ ನಿಧಾನಕ್ಕೆ ಕಡಿಮೆಯಾಗುತ್ತಿದ್ದಾರೆ. ಇರುವ ಕೆಲವು ಉತ್ತಮ ಲೇಖಕರು ಸೀಮಿತ ಅನುಭವಗಳನ್ನೇ ಮತ್ತೆಮತ್ತೆ ತಮ್ಮ ಕೃತಿಗಳಲ್ಲಿ ಮಂಡಿಸುತ್ತಿರುತ್ತಾರೆ. ಅವರ ಸಾಹಿತ್ಯ ಕೃತಿಗಳ ಅನುಭವ ಲೋಕ ತೀರ ವಿಸ್ತಾರಗೊಳ್ಳಲು ಹವಣಿಸುವುದಿಲ್ಲ. ಹಾಗಾಗಿ ದೊಡ್ಡ ಜೀವನಾನುಭವ, ದರ್ಶನ ಇಲ್ಲದ ಪುಸ್ತಕಗಳು ಕೇವಲ ಪದಗಳ ಸಮೂಹವಾಗಿ ಉಳಿದುಕೊಳ್ಳುತ್ತವೆ. ಹೊರಜಗತ್ತಿನ ವಿಶಿಷ್ಟ ಸಂವೇದನೆಗಳನ್ನು ತಮ್ಮೊಳಗೆ ಬಿಟ್ಟುಕೊಳ್ಳದವರು ಓದುಗರನ್ನು ಮುಟ್ಟಲಾಗದು. ಇತ್ತೀಚಿನ ಬರಹಗಾರರ ಅನುಭವ ಲೋಕ ಎಷ್ಟು ತೆಳು ಎಂದರೆ ಅವರ ಬರವಣಿಗೆ ಬದುಕನ್ನು ಸನಿಹದಿಂದ ಸ್ಪರ್ಶಿಸಿದವರ ದಾಖಲೆಯಾಗಿ ಕಾಣುವುದಿಲ್ಲ.



ಕಲೆ: ಬಸವರಾಜಾಚಾರ್ ಕೆ.ಆರ್.

ಕಾವ್ಯ, ಕತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆಯ ಪ್ರಕಾರಗಳನ್ನು ಎತ್ತರಕ್ಕೆ ತೆಗೆದುಕೊಂಡು ಹೋಗುವಂತಹ ದೊಡ್ಡ ಪ್ರತಿಭೆಗಳ ಗೈರುಹಾಜರಿ ಕೂಡ ಈ ದಿಸೆಯಲ್ಲಿ ಗಮನಿಸಬೇಕಾದ ಅಂಶವೇ. ಅಂತಹ ದೊಡ್ಡ ಪ್ರತಿಭೆಯ ಅಖಂಡ ರೂಪ ನಾಲ್ಕಾರು ಲೇಖಕರಲ್ಲಿ ಹಂಚಿಹೋಗಿದೆ. ಒಂದು ವೇಳೆ ಎಲ್ಲ ಪ್ರಕಾರಗಳಲ್ಲಿ ದೊಡ್ಡ ಪ್ರತಿಭೆಗಳು ಬರುವಂತಾದರೆ ವರ್ತಮಾನದ ಕನ್ನಡ ಸಾಹಿತ್ಯದ ಚಲನೆ ಕೊಂಚ ವೇಗವನ್ನು ಪಡೆಯಬಹುದು. ಇದು ಕೊನೆಗೂ ಲೇಖಕರ ಕಸುಬುದಾರಿಕೆ, ಅನುಭವವನ್ನೇ ಅವಲಂಬಿಸಿರುತ್ತದೆ. ಗ್ರಹಿಕೆ ಮೊನಚುಗೊಳ್ಳದ, ತಲ್ಲಣಗೊಳಿಸುವ ಅನುಭವ ಲೋಕಗಳಿಗೆ ಮುಖಾಮುಖಿಯಾಗದ ಬರಹಗಾರರಿಂದ ಯಾವುದೇ ಭಾಷೆಯಲ್ಲಿ ಅಭಿಜಾತ ಕೃತಿಗಳನ್ನು ಬಯಸುವುದು ಅಸಾಧ್ಯ. ಅಸಾಧ್ಯ ಮಾತ್ರವಲ್ಲ ಅದು ಅತಿಯಾದ ನಿರೀಕ್ಷೆಯೂ ಆದೀತು.

ನಮ್ಮ ಓದುಗರೂ ಹತ್ತುಹಲವು ಆಸಕ್ತಿಗಳಲ್ಲಿ ಹಂಚಿಹೋಗಿದ್ದಾರೆ. ಸಾಹಿತ್ಯವೇ ಅವರ ಪ್ರಮುಖ ಆದ್ಯತೆಯಾಗಿ ಉಳಿದಿಲ್ಲ. ದೊಡ್ಡ ಗಾತ್ರದ, ದೀರ್ಘ ಕಥನಗಳ ಪುಸ್ತಕಗಳಿಗೆ ಇರುವುದು ಕೆಲವೇ ಓದುಗರಷ್ಟೆ. ಈಗ ಎಲ್ಲವೂ ಚುಟುಕಾಗಿವೆ, ಚುರುಕಾಗಿವೆ, ರಂಜನೀಯವಾಗಿವೆ. ಅವರವರ ಅಗತ್ಯಕ್ಕೆ ತಕ್ಕಂತೆ ಓದು ನಡೆಯುತ್ತಿದೆ. ಇಂಥ ಸಮಯದಲ್ಲಿ ಓದುಗರನ್ನು ಸಾಹಿತ್ಯದ ಕಡೆಗೆ ಸೆಳೆಯುವ ಪ್ರಯತ್ನವನ್ನು ಲೇಖಕರೇ ಮಾಡಬೇಕಾಗುತ್ತದೆ. ಅದೇ ಅವರ ಎದುರಿಗಿರುವ ಸವಾಲು ಮತ್ತು ಜವಾಬ್ದಾರಿ. ಅದು ಹೊಸಬಗೆಯ ನಿರೂಪಣೆಯ ಕ್ರಮ, ಅನುಭವದ ಮಂಡನೆ, ಒಕ್ಕಣಿಕೆಯಿಂದ ಮಾತ್ರ ಸಾಧ್ಯ. ಕನ್ನಡದಲ್ಲಿ ಅಂತಹ ಲೇಖಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತಾಗಲಿ ಎಂದು ಹೊಸ ವರ್ಷದಲ್ಲಿ ಆಶಿಸೋಣ.

**ಸಂದೀಪ ನಾಯಕ**